# ಭಾರತದಲ್ಲಿ ಡಿಸೆಂಬರ್ ವೇಳೆಗೆ ತನ್ನ ವಹಿವಾಟನ್ನು ಮೂರು ಪಟ್ಟು ಹೆಚ್ಚಿಸಲು ಉದ್ದೇಶಿಸಿರುವ ಫ್ಲಿಪ್‌ಕಾರ್ಟ್ ಹೋಲ್‌ಸೇಲ್

- **2021ರ ಜುಲೈ – ಡಿಸೆಂಬರ್ ಅವಧಿಯಲ್ಲಿ ಕಿರಾಣಿ ಅಂಗಡಿಗಳು ಅಳವಡಿಸಿಕೊಳ್ಳಲಿರುವ ಇ-ಕಾಮರ್ಸ್ ಸೌಲಭ್ಯವು ಮೂರು ಪಟ್ಟು ಹೆಚ್ಚಳವಾಗುವ ಸಾಧ್ಯತೆ ಇದೆ. ಬಿ2ಬಿ ವಹಿವಾಟು ಖರೀದಿ ವಿಧಾನಕ್ಕೆ ಡಿಜಿಟಲ್ ವಿಧಾನಕ್ಕೆ ಆದ್ಯತೆ ನೀಡುವ ಸಂಕೇತ ಇದಾಗಿದೆ**
- **2021ರ ಅಂತ್ಯದ ವೇಳೆಗೆ ಫ್ಲಿಪ್‌ಕಾರ್ಟ್ ಸಗಟು ಮಾರಾಟದಲ್ಲಿ ನೋಂದಾಯಿತ ಪೂರೈಕೆದಾರರ ಸಂಖ್ಯೆ ಶೇ 58ರಷ್ಟು ಹೆಚ್ಚಾಗಲಿದೆ. ಇದು ಸ್ಥಳೀಯ ವಹಿವಾಟು ಮತ್ತು ಜೀವನೋಪಾಯಗಳನ್ನು ಮತ್ತಷ್ಟು ಹೆಚ್ಚಿಸಲಿದೆ**
- **ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ವಹಿವಾಟು, ಈ ವರ್ಷಾಂತ್ಯದ ವೇಳೆಗೆ ಭಾರತದ 2,700 ನಗರಗಳಲ್ಲಿನ ಕಿರಾಣಿ ಮಳಿಗೆಗಳಿಗೆ ಸೇವೆ ಒದಗಿಸಲಿದ್ದು, ಲಕ್ಷಾಂತರ ಸಣ್ಣ ವ್ಯಾಪಾರಿಗಳಿಗೆ ಡಿಜಿಟಲ್ ವಹಿವಾಟಿನ ಲಾಭ ಒದಗಿಸಲಿದೆ**

**ಬೆಂಗಳೂರು, ಆಗಸ್ಟ್ 19, 2021:** ಭಾರತದಲ್ಲಿ ಗಮನಾರ್ಹವಾಗಿ ಬೆಳವಣಿಗೆ ಕಂಡಿರುವ ದೇಶಿ ಸಂಸ್ಥೆಯಾಗಿರುವ ಫ್ಲಿಪ್‌ಕಾರ್ಟ್ ಗ್ರೂಪ್‌ನ ಬಿ2ಬಿ ಸಗಟು ಮಾರುಕಟ್ಟೆಯ ಡಿಜಿಟಲ್ ತಾಣವಾಗಿರುವ ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ದೇಶದಾದ್ಯಂತ ತನ್ನ ವಹಿವಾಟನ್ನು ಮೂರು ಪಟ್ಟು ಹೆಚ್ಚಿಸಲು 2,700 ನಗರಗಳಲ್ಲಿ ವಹಿವಾಟು ವಿಸ್ತರಿಸುವ ಯೋಜನೆಯನ್ನು ಪ್ರಕಟಿಸಿದೆ. ದೇಶದಾದ್ಯಂತ ಇರುವ ಸಣ್ಣ ವ್ಯಾಪಾರಿಗಳು ಮತ್ತು ಕಿರಾಣಿ ಅಂಗಡಿ ಮಾಲೀಕರ ವಹಿವಾಟನ್ನು ಸುಲಭಗೊಳಿಸುವ ಮತ್ತು ಅವರಿಗೆ ಸಮೃದ್ಧಿ ತರುವ ಉದ್ದೇಶದಿಂದ ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದೆ.

ಸೆಪ್ಟೆಂಬರ್ 2020ರಲ್ಲಿ ಪ್ರಾರಂಭವಾದ ಫ್ಲಿಪ್‌ಕಾರ್ಟ್ ಹೋಲ್‌ಸೇಲ್‌ನ ಮಾರಾಟವು 2021ರ ಮೊದಲಾರ್ಧದಲ್ಲಿ ಗಮನಾರ್ಹ ಬೆಳವಣಿಗೆ ಕಂಡಿದೆ. ರಿಟೇಲ್ ವ್ಯಾಪಾರಿಗಳು ಮತ್ತು ಕಿರಾಣಿ ಅಂಗಡಿ ಮಾಲೀಕರು ಇ-ಕಾಮರ್ಸ್ ಅಳವಡಿಸಿಕೊಂಡಿದ್ದರಿಂದ ಈ ಪ್ರಗತಿ ಸಾಧ್ಯವಾಗಿದೆ. ಫ್ಲಿಪ್‌ಕಾರ್ಟ್ ಹೋಲ್‌ಸೇಲ್‌ನಲ್ಲಿ ಕಿರಾಣಿ ಅಂಗಡಿ ಮಾಲೀಕರ ಇ-ಕಾಮರ್ಸ್ ಅಳವಡಿಕೆಯು ಹಿಂದಿನ ವರ್ಷಕ್ಕೆ ಹೋಲಿಸಿದರೆ ಈ ವರ್ಷದ ಜನವರಿ-ಜೂನ್‌ನಲ್ಲಿ ದ್ವಿಗುಣಗೊಂಡಿದೆ. ಇದು 2021ರ ಜುಲೈ-ಡಿಸೆಂಬರ್ ಅವಧಿಯಲ್ಲಿ ಶೇ 180ರಷ್ಟು ಬೆಳವಣಿಗೆ ಕಾಣುವ ನಿರೀಕ್ಷೆ ಇದೆ.

ಡಿಜಿಟಲ್ ಬಿ2ಬಿ ಮಾರುಕಟ್ಟೆ ತಾಣದಲ್ಲಿ ವಹಿವಾಟು ನಡೆಸಲು ಆಸಕ್ತಿ ತೋರಿಸಿರುವ ಪೂರೈಕೆದಾರರ ಹೆಚ್ಚಳವನ್ನೂ ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ಕಂಡಿದೆ. ಸರಕುಗಳ ಪೂರೈಕೆದಾರರ ಪ್ರಮಾಣವು 2021ರಲ್ಲಿ ಶೇ 58ರಷ್ಟು ಬೆಳೆಯುವ ನಿರೀಕ್ಷೆಯಿದೆ. ಇದು ಸ್ಥಳೀಯ ವಹಿವಾಟು ವ್ಯವಸ್ಥೆ ಹಾಗೂ ಜೀವನೋಪಾಯಗಳನ್ನು ಮತ್ತಷ್ಟು ಹೆಚ್ಚಿಸಲಿದೆ. ಸರಕುಗಳ ಮಾರಾಟದ ವಿಭಿನ್ನ ಮಾದರಿಯ ವಹಿವಾಟಿನ ಮೂಲಕ ಭಾರತದಲ್ಲಿನ ಕಿರಾಣಿ ಅಂಗಡಿಗಳ ವಹಿವಾಟಿನ ಪ್ರಗತಿಗೆ ಕಂಪನಿಯು ಬದ್ಧವಾಗಿರುವುದರ ಜೊತೆಗೆ, 2020ರಲ್ಲಿ ವಾಲ್‌ಮಾರ್ಟ್ ಇಂಡಿಯಾದಿಂದ ಸ್ವಾಧೀನಪಡಿಸಿಕೊಂಡಿರುವ ತನ್ನ ಅತ್ಯುತ್ತಮ ಬೆಲೆಯ ಕ್ಯಾಷ್ ಆ್ಯಂಡ್ ಕ್ಯಾರಿ ವಹಿವಾಟಿಗೆ ಕಂಪನಿಯು ಹೊಸ ಬ್ರ್ಯಾಂಡ್ ನೀಡಿದೆ.

**ಫ್ಲಿಪ್‌ಕಾರ್ಟ್ ಹೋಲ್‌ಸೇಲ್‌ನ ಹಿರಿಯ ಉಪಾಧ್ಯಕ್ಷ ಮತ್ತು ಮುಖ್ಯಸ್ಥರಾಗಿರುವ ಆದರ್ಶ್ ಮೆನನ್** ಅವರು ಈ ಬಗ್ಗೆ ಪ್ರತಿಕ್ರಿಯಿಸಿ, 'ದೇಶದಾದ್ಯಂತ ಇರುವ ಕಿರಾಣಿ ಅಂಗಡಿ ಮಾಲೀಕರ ಸಮಸ್ಯೆಗಳನ್ನು ಪರಿಹರಿಸುವ ಮತ್ತು ಬಿ2ಬಿ ರಿಟೇಲ್ ವಹಿವಾಟಿನಲ್ಲಿ ಸಮೃದ್ಧಿ ತರುವ ಉದ್ದೇಶದಿಂದ ನಾವು ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ವಹಿವಾಟನ್ನು ಆರಂಭಿಸಿದ್ದೇವೆ. ಕೋವಿಡ್ ಪಿಡುಗು ಒಡ್ಡಿರುವ ಸವಾಲುಗಳ ಹೊರತಾಗಿಯೂ, ಡಿಜಿಟಲೀಕರಣದ ಪ್ರಯೋಜನಗಳನ್ನು ಅರಿತುಕೊಳ್ಳುತ್ತಿರುವ ಮತ್ತು ಸರಕುಗಳ ಖರೀದಿಗೆ ಇ-ಕಾಮರ್ಸ್‌ಗೆ ಹೆಚ್ಚಿನ ಒಲವು ತೋರುತ್ತಿರುವ ಕಿರಾಣಿ ಅಂಗಡಿಗಳಿಂದ ನಾವು ಹೆಚ್ಚಿನ ಪ್ರತಿಕ್ರಿಯೆಯನ್ನು ಕಾಣುತ್ತಿದ್ದೇವೆ. ನಾವು ಫ್ಲಿಪ್‌ಕಾರ್ಟ್ ಗ್ರೂಪ್‌ನಿಂದ ತಂತ್ರಜ್ಞಾನದ ಸಾಮರ್ಥ್ಯಗಳನ್ನು ಬಳಸಿಕೊಳ್ಳುವುದನ್ನು ಮುಂದುವರಿಸುತ್ತೇವೆ. ದೇಶದಾದ್ಯಂತ ಜೀವನೋಪಾಯ ಮತ್ತು ಸ್ಥಳೀಯ ಪೂರೈಕೆದಾರರ ವ್ಯವಸ್ಥೆಯನ್ನು ಬಲಪಡಿಸುತ್ತೇವೆ' ಎಂದು ಹೇಳಿದ್ದಾರೆ.

ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಸಿದರೆ 2021ರ ಜನವರಿ-ಜೂನ್ ಅವಧಿಯಲ್ಲಿ ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ತನ್ನ ಕಿರಾಣಾ ಗ್ರಾಹಕರ ಸಂಖ್ಯೆಯಲ್ಲಿ ಶೇ 17ರಷ್ಟು ಬೆಳವಣಿಗೆ ಕಂಡಿದೆ. ಈ ಸೌಲಭ್ಯದ ಬಗ್ಗೆ ಕಿರಾಣಿ ಅಂಗಡಿ

ಮಾಲೀಕರು ತೋರಿಸುತ್ತಿರುವ ವಿಶ್ವಾಸವನ್ನು ಇದು ದೃಢಪಡಿಸುತ್ತದೆ. ಕಿರಾಣಾ ಗ್ರಾಹಕರ ಸಂಖ್ಯೆಯು ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ 2021ರ ಜುಲೈ–ಡಿಸೆಂಬರ್‌ನಲ್ಲಿ ಶೇ 33ರಷ್ಟು ಹೆಚ್ಚಾಗುವ ನಿರೀಕ್ಷೆಯಿದೆ.

ಕಿರಾಣಿ ಮಳಿಗೆಗಳು, ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ವಹಿವಾಟಿನ ಪ್ರಮುಖ ಗ್ರಾಹಕ ವಿಭಾಗವಾಗಿ ಮುಂದುವರಿಯಲಿದೆ. ಉತ್ತಮ ಬೆಲೆಗಳ ಶ್ರೇಣಿ, ಸಾಲದ ಕೊಡುಗೆಗಳು, ಪಾವತಿ ಆಯ್ಕೆಗಳು, ಮಳಿಗೆಗಳಿಗೆ ಭೇಟಿ ನೀಡುವ ಮಾರಾಟ ಪ್ರತಿನಿಧಿಗಳು ಮತ್ತು ಕ್ಯಾಷ್ ಆ್ಯಂಡ್ ಕ್ಯಾರಿ ಮಳಿಗೆಗಳ ಮೂಲಕ ಒದಗಿಸುವ ಸೇವೆಗಳು, ಆ್ಯಪ್ ಮತ್ತು ನಗದು–ಮೂಲಕ ಉತ್ತಮ ಉತ್ಪನ್ನಗಳ ಸೌಲಭ್ಯಗಳನ್ನು ಕಿರಾಣಾಗಳು ಪಡೆಯಲಿವೆ. ಫ್ಲಿಪ್‌ಕಾರ್ಟ್ ಹೋಲ್‌ಸೇಲ್‌ಗೆ ಮರುಬ್ರ್ಯಾಂಡ್ ಮಾಡಿರುವುದರಿಂದ ಕಿರಾಣಿ ಅಂಗಡಿಗಳು ಈ ಮೊದಲಿನಂತೆಯೇ ಅನುಕೂಲತೆಗಳನ್ನು ಪಡೆಯಬಹುದು. ಅತ್ಯುತ್ತಮ ಬೆಲೆಯ ಸೌಲಭ್ಯಗಳು ಈಗ ಫ್ಲಿಪ್‌ಕಾರ್ಟ್ ಹೋಲ್‌ಸೇಲ್‌ನಲ್ಲಿ ಲಭ್ಯ ಇರುವುದರಿಂದ ಇದೊಂದು ಅತ್ಯುತ್ತಮವಾದ ವಿಭಿನ್ನ ಬಗೆಯ ವಹಿವಾಟಿನ ಬಿ2ಬಿ ವಹಿವಾಟು ತಾಣವಾಗಿದೆ.

ಇ–ಕಾಮರ್ಸ್ ಅನ್ನು ತಮ್ಮ ಆದ್ಯತೆಯ ಖರೀದಿ ವಿಧಾನವಾಗಿ ಅಳವಡಿಸಿಕೊಳ್ಳುತ್ತಿರುವ ಕಿರಾಣಿ ಅಂಗಡಿಗಳು ಮತ್ತು ರಿಟೇಲ್ ವ್ಯಾಪಾರಿಗಳಿಗೆ ಉತ್ತಮ ಸೇವೆ ನೀಡಲು, ಫ್ಲಿಪ್‌ಕಾರ್ಟ್ ಹೋಲ್‌ಸೇಲ್, ಫ್ಲಿಪ್‌ಕಾರ್ಟ್ ಗ್ರೂಪ್‌ನ ಅನುಭವವನ್ನು ಮತ್ತು ಡಿಜಿಟಲ್ ಕ್ಷೇತ್ರದಲ್ಲಿನ ಪರಿಣತಿಯನ್ನು ಸಮರ್ಥವಾಗಿ ಬಳಸಿಕೊಳ್ಳುತ್ತಿದೆ.

ಫ್ಲಿಪ್‌ಕಾರ್ಟ್ ಹೋಲ್‌ಸೇಲ್, ಸದ್ಯಕ್ಕೆ ದೇಶದಾದ್ಯಂತ 15 ಲಕ್ಷಕ್ಕೂ ಹೆಚ್ಚಿನ ತನ್ನ ಗ್ರಾಹಕರಿಗೆ ಸೇವೆ ಸಲ್ಲಿಸುತ್ತಿದೆ. ಇದರಲ್ಲಿ ಕಿರಾಣಿ ಅಂಗಡಿಗಳು, ಹೋರೆಕಾ (ಹೋಟೆಲ್, ರೆಸ್ಟೋರೆಂಟ್ ಮತ್ತು ಕೆಫೆಟೇರಿಯಾ) ಮತ್ತು ಕಚೇರಿಗಳು ಮತ್ತು ಸಂಸ್ಥೆಗಳು ಸೇರಿವೆ.

ಫ್ಲಿಪ್‌ಕಾರ್ಟ್ ಹೋಲ್‌ಸೇಲ್ (ಸಗಟು) ಗ್ರಾಹಕರು ಫ್ಲಿಪ್‌ಕಾರ್ಟ್‌ನ ವ್ಯಾಪಕ ಶ್ರೇಣಿಯ ಖಾತರಿದಾಯಕ ಗುಣಮಟ್ಟದ ಉತ್ಪನ್ನಗಳು, ಸರಳ ಮತ್ತು ಅನುಕೂಲಕರ ಆರ್ಡರ್ ರಿಟರ್ನ್‌ಗಳು ಮತ್ತು ತಮ್ಮ ಅಂಗಡಿಗಳಿಗೆ ತ್ವರಿತ ಉತ್ಪನ್ನ ವಿತರಣೆಯ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಾರೆ. ಸುಲಭವಾದ ಆರ್ಡರ್ ಟ್ರ್ಯಾಕಿಂಗ್ ಸೌಲಭ್ಯ ಮತ್ತು ಪ್ರತಿ ಉತ್ಪನ್ನದ ಮೇಲೆ ಉತ್ತಮವಾದ ಲಾಭಾಂಶದ ಪ್ರಯೋಜನಗಳನ್ನು ಪಡೆದುಕೊಳ್ಳುತ್ತಾರೆ.

**ಫ್ಲಿಪ್‌ಕಾರ್ಟ್ ಗ್ರೂಪ್ ಬಗ್ಗೆ**

ಫ್ಲಿಪ್‌ಕಾರ್ಟ್ ಗ್ರೂಪ್, ಭಾರತದ ಪ್ರಮುಖ ಡಿಜಿಟಲ್ ವಾಣಿಜ್ಯ ಸಂಸ್ಥೆಗಳಲ್ಲಿ ಒಂದಾಗಿದೆ. ಗ್ರೂಪ್ ಕಂಪನಿಗಳಾದ ಫ್ಲಿಪ್‌ಕಾರ್ಟ್, ಮಿಂತ್ರಾ, ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ಮತ್ತು ಕ್ಲಿಯರ್‌ಟ್ರಿಪ್ ಒಳಗೊಂಡಿದೆ. ಈ ಗ್ರೂಪ್ ಭಾರತದ ಪ್ರಮುಖ ಪಾವತಿ ಆ್ಯಪ್‌ಗಳಲ್ಲಿ ಒಂದಾಗಿರುವ ಫೋನ್‌ಪೇ ದಲ್ಲಿ ಗರಿಷ್ಠ ಷೇರುಗಳನ್ನು ಹೊಂದಿದೆ.

2007ರಲ್ಲಿ ಆರಂಭವಾಗಿರುವ ಫ್ಲಿಪ್‌ಕಾರ್ಟ್, ಲಕ್ಷಾಂತರ ಗ್ರಾಹಕರು, ಮಾರಾಟಗಾರರು, ವ್ಯಾಪಾರಿಗಳು ಮತ್ತು ಸಣ್ಣ ಉದ್ಯಮಗಳು ಭಾರತದ ಡಿಜಿಟಲ್ ವಾಣಿಜ್ಯ ಕ್ರಾಂತಿಯ ಭಾಗವಾಗಲು ಅನುವು ಮಾಡಿಕೊಟ್ಟಿದೆ. ನೋಂದಾಯಿತ ಗ್ರಾಹಕರ ಸಂಖ್ಯೆ 35 ಕೋಟಿಗಿಂತಲೂ ಹೆಚ್ಚಾಗಿದೆ. 80ಕ್ಕೂ ವಿಭಾಗಗಳಲ್ಲಿ 15 ಕೋಟಿ ಉತ್ಪನ್ನಗಳನ್ನು ನೀಡುತ್ತಿದೆ. ಭಾರತದಲ್ಲಿ ವಾಣಿಜ್ಯ ವಹಿವಾಟು ಎಲ್ಲರಿಗೂ ಸಮಾನವಾಗಿ ದೊರೆಯುವಂತೆ ಮಾಡಲು, ಎಲ್ಲರಿಗೂ ಅದು ಕೈಗೆಟುಕುವಂತೆ ಮಾಡಲು, ಗ್ರಾಹಕರನ್ನು ಸಂತೋಷಪಡಿಸಲು, ವಹಿವಾಟಿನ ವಲಯದಲ್ಲಿ ಲಕ್ಷಾಂತರ ಉದ್ಯೋಗಗಳನ್ನು ಸೃಷ್ಟಿಸಲು ಮತ್ತು ಉದ್ಯಮಿಗಳು ಮತ್ತು ಎಂಎಸ್‌ಎಂಇಗಳ ತಲೆಮಾರುಗಳನ್ನು ಸಬಲೀಕರಣಗೊಳಿಸುವ ನಮ್ಮ ಪ್ರಯತ್ನಗಳು ಫಲ ನೀಡಿವೆ. ಉದ್ಯಮಗಳಲ್ಲಿ ಅನೇಕ ಹೊಸತನಗಳನ್ನು ಮೊದಲ ಬಾರಿಗೆ ಪರಿಚಯಿಸಲು ನಮಗೆ ಪ್ರೇರಣೆ ನೀಡಿವೆ. ಸರಕು ಪೂರೈಸಿದ ನಂತರವೇ ನಗದು ಪಾವತಿ (ಕ್ಯಾಷ್ ಆನ್ ಡೆಲಿವರಿ), ಬಡ್ಡಿರಹಿತ ಸಮಾನ ಮಾಸಿಕ ಕಂತು ಪಾವತಿ ಸೌಲಭ್ಯ (ನೋ ಕಾಸ್ಟ್ ಇಎಂಐ) ಮತ್ತು ಸುಲಭ ರಿಟರ್ನ್ಸ್ ಸೌಲಭ್ಯಗಳನ್ನು ಮೊದಲ ಬಾರಿಗೆ ಪರಿಚಯಿಸಿರುವುದಕ್ಕೆ ಫ್ಲಿಪ್‌ಕಾರ್ಟ್ ಹೆಸರುವಾಸಿಯಾಗಿದೆ. ಗ್ರಾಹಕ ಕೇಂದ್ರಿತ ಆವಿಷ್ಕಾರಗಳು ಲಕ್ಷಾಂತರ ಭಾರತೀಯರಿಗೆ ಆನ್‌ಲೈನ್ ಶಾಪಿಂಗ್ ಅನ್ನು ಹೆಚ್ಚು ಸುಲಭವಾಗಿ ಮತ್ತು ಕೈಗೆಟುಕುವಂತೆ ಮಾಡಿದೆ. ತನ್ನ ಗ್ರೂಪ್ ಕಂಪನಿಗಳ ಜೊತೆಯಲ್ಲಿ, ಫ್ಲಿಪ್ ಕಾರ್ಟ್ ತಂತ್ರಜ್ಞಾನದ ಮೂಲಕ ಭಾರತದಲ್ಲಿ ವಾಣಿಜ್ಯ ವಹಿವಾಟನ್ನು ಪರಿವರ್ತಿಸಲು ಬದ್ಧವಾಗಿದೆ.

For more information, please write to media@flipkart.com